# ಮದ್ದೂರು ಕೋದಂಡರಾಮ

ಮಂಡ್ಯ ಜಿಲ್ಲೆಯ ಮದ್ದೂರಿನ ನರಸಿಂಹ ದೇವಾಲಯದ ಆವರಣದಲ್ಲಿ ಇರುವ ಈ ಪ್ರತ್ಯೇಕವಾದ ಚಿಕ್ಕದಾದ ಗುಡಿಯಲ್ಲಿ ಕೋದಂಡರಾಮನ ಮೂರ್ತಿ ಇದೆ. ಇಲ್ಲಿ ರಾಮ, ಲಕ್ಷ್ಮಣ ಹಾಗೂ ಸೀತೆಯರ ಪ್ರತ್ಯೇಕ ಮೂರ್ತಿಗಳಿವೆ. ಇಲ್ಲಿನ ಹನುಮಂತನ ಮೂರ್ತಿ ವಿಭಿನ್ನವಾಗಿದ್ದು ನಿಂತು ಭಾಗಿ ನಮಿಸುವಂತೆ ಇದೆ. ಮಾತುನಾಡುವಾಗ ತನ್ನ ಎಂಜಲು ಸೋಕದಂತೆ ಕೈಯನ್ನು ಅಡ್ಡ ಹಿಡಿದಂತೆ ಭಾಸವಾಗುತ್ತದೆ. ರಾಮ ಮತ್ತು ಲಕ್ಷ್ಮಣರ ಬಾಣ ಮತ್ತು ಬಿಲ್ಲಿನ ಕೆತ್ತನೆ ತುಂಬಾ ಕಲಾತ್ಮಕವಾಗಿ ಮೂಡಿದೆ.

—ಶ್ರೀನಿವಾಸಮೂರ್ತಿ ಎನ್. ಎಸ್.





# ವರ್ಣಮಾಲೆಯ ದೋಸೆ

ಚಿತ್ರದಲ್ಲಿರುವ ವರ್ಣಮಾಲೆ ಇರುವುದು ಶಾಲೆಯ ಕರಿಹಲಗೆ ಮೇಲಲ್ಲ! ಅಡುಗೆಮನೆಯ ದೋಸೆ ಕಾವಲಿ ಮೇಲೆ!

ಕೋವಿಡ್19ರ ಕಾಟದಿಂದ ವಠಾರದ ಮಕ್ಕಳಿಗೆ ರಜೆಯಿಂದ ತುಂಬಾ ತೊಂದರೆಯಾಗಿತ್ತು. ಮನೆಲ್ಲಿದ್ದ ಮ್ಯಾಗಿ, ಬಿಸ್ಕತ್, ಚಾಕೊಲೇಟ್, ಹಣ್ಣು ಖಾಲಿಯಾಗಿತ್ತು. ತಿನ್ನಲು ಅದು ಬೇಕು, ಇದು ಬೇಕು ಎಂದು ಮಕ್ಕಳ ರಚ್ಚೆ. ವಠಾರದ ಮಕ್ಕಳಿಗೆ ಶಿಕ್ಷಕಿ ಪೂರ್ಣಿಮಾ ಗುರುದೇವ್ ಕನ್ನಡ ವರ್ಣಮಾಲೆ ಅ, ಆ, ಇ.... ಹಾಗೂ ಆಂಗ್ಲ ವರ್ಣಮಾಲೆ **A, B, C, D....**ಯಂತೆ ಹಿಟ್ಟನ್ನು ದೋಸೆ ಕಾವಲಿ ಮೇಲೆ ಹಾಕಿ ದೋಸೆ ತೆಗೆದದ್ದು ಮಕ್ಕಳಿಗೆ ಖುಷಿಯೋ ಖುಷಿ! ಅದು ಬೇಕು ಇದು ಬೇಕು ಅಂದವರೆಲ್ಲಾ ವರ್ಣಮಾಲೆಯ ಅ ದೋಸೆ ಕೊಡಿ, ಆ ದೋಸೆ ಕೊಡಿ, ಬಿಲ್ಲು ದೋಸೆ ಕೊಡಿ ಎಂದು ದೋಸೆಗೆ ಮುಗಿ ಬಿದ್ದು ಚಪ್ಪರಿಸಿದ್ದೇ! ಅಂತೂ ಅವರಿಗೆ ತಿಂಡಿಯ ಜೊತೆಗೆ ಪಾಠವೂ ಆಯ್ತು! ಹೊಸ ಪ್ರಯೋಗ ಫಲಿಸಿತು. ಸದ್ಯ ಇದು ರಜಾದಿನಗಳಲ್ಲಿ ಮಾತ್ರ ನೆನಪಿರಲಿ!

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ

# ಕಾಳಜಿಯೋ? ಕುಶಾಲಿಗೋ?

ವಿಶ್ವವನ್ನು ಆಕ್ರಮಿಸಿದ ಭಯಾನಕ ಕೊರೊನಾ ನಮ್ಮ ದೇಶದಲ್ಲೂ ಭಯದ ವಾತಾವರಣ ನಿರ್ಮಿಸಿದೆ. ಕೊರೊನಾದ ಬಗ್ಗೆ ಸಾರ್ವಜನಿಕರಾದ ನಮ್ಮ ಕಾಳಜಿ ಸಾಲದು. ಕೆಲವರು ಕೊರೊನಾವನ್ನು ಬಹಳ ಗಂಭೀರವಾಗಿ ತೆಗೆದು ಕೊಂಡರೆ ಇನ್ನು ಹಲವರು ಲಘುವಾಗಿ ತೆಗೆದುಕೊಳ್ಳುತ್ತಿದ್ದಾರೆ!

ಇಲ್ಲೊಬ್ಬ ಮಹಾಶಯನನ್ನು ಗಮನಿಸಿ. ಇದು ಇವನು ಕೊರೊನಾದ ಬಗ್ಗೆ ತೋರುವ ಕಾಳಜಿಯೋ ಅಥವಾ ತಮಾಷೆಗೋ ಅರ್ಥವಾಗದು. ಗೋಣಿ ಚೀಲದ ಮಾಸ್ಕ್ ಅನ್ನು ಧರಿಸಿ ಎಲ್ಲಿಗೋ ಅವರು ಹೊರಟಂತಿದೆ. ಏನೇ ಇರಲಿ. ಅವರ ಭಂಗಿಯನ್ನು ಗಮನಿಸಿದರೆ ಭಯದಲ್ಲಿದ್ದ ನಮಗೂ ನಗು ಬಾರದೇ ಇರದು!

—ಬೀರಣ್ಣ ನಾಯಕ ಮೊಗಟಾ

